




# ಮೈಸೂರಿನಲ್ಲಿ ಕರ್ನಾಟಕ ರಾಮಕೃಷ್ಣ-ವಿವೇಕಾನಂದ ಭಾವಪ್ರಚಾರ ಪರಿಷತ್ತಿನ ೯ನೇ ವಾರ್ಷಿಕ ಸಮ್ಮೇಳನ

ರಾಮಕೃಷ್ಣ-ವಿವೇಕಾನಂದ ಭಾವಪ್ರಚಾರ ಪರಿಷತ್ತಿನ ಕರ್ನಾಟಕ ವಿಭಾಗದ ೯ನೇ ವಾರ್ಷಿಕ ಸಮ್ಮೇಳನವು ಜನವರಿ ೫, ೬ ಮತ್ತು ೭ರಂದು ಮೈಸೂರಿನಲ್ಲಿ ನಡೆಯಿತು. ಮೈಸೂರಿನ **ಶ್ರೀರಾಮಕೃಷ್ಣ ಸೇವಾ ಸಂಘ**ವು ಸಂಯೋಜಿಸಿದ್ದ ೩ ದಿನಗಳ ಈ ಕಾರ್ಯಕ್ರಮವು ಕುವೆಂಪುನಗರದ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ಅತ್ಯಂತ ಯಶಸ್ವಿಯಗಿ ನೆರವೇರಿತು. ವಿವಿಧ ರಾಮಕೃಷ್ಣ ಆಶ್ರಮಗಳಿಂದ ಆಗಮಿಸಿದ್ದ ನೂರಕ್ಕೂ ಹೆಚ್ಚು ಸಂನ್ಯಾಸಿಗಳು, ಜನಪ್ರತಿನಿಧಿಗಳು, ಸಾಹಿತಿಗಳು ಹಾಗೂ ಪ್ರಸಿದ್ಧ ಕಲಾವಿದರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ನಾಡಿನ ವಿವಿಧ ಪ್ರದೇಶಗಳಿಂದ ಆಗಮಿಸಿದ್ದ ೧೫೦೦ಕ್ಕೂ ಹೆಚ್ಚಿನ ಭಕ್ತ-ಪ್ರತಿನಿಧಿಗಳು ಎಲ್ಲ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರು.

**ಶೋಭಾಯಾತ್ರೆ :** ದಿನಾಂಕ ೫ ರಂದು ಸಂಜೆ ೩ಕ್ಕೇ ಸದ್ವಿದ್ಯಾ ಶಾಲೆಯ ಸಭಾಂಗಣದಲ್ಲಿ ಶೋಭಾಯಾತ್ರೆಯ ಉದ್ಘಾಟನೆ ನಡೆಯಿತು. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿ ಚುಂಚನಗಿರಿ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಮೈಸೂರು ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜಿ ಹಾಗೂ ಇತರ ಸಂನ್ಯಾಸಿ ವೃಂದದವರು ಶೋಭಾಯಾತ್ರೆಗೆ ಚಾಲನೆ ನೀಡಿದರು. ವೀರಗಾಸೆ, ತಮಟೆ, ನಗಾರಿಗಳೊಂದಿಗೆ ಸ್ವಾಮಿ ವಿವೇಕಾನಂದರ ಪ್ರತಿಮೆಯನ್ನು ಹೊತ್ತ ರಥವು 'ವಿವೇಕಸ್ಮಾರಕ'ದಿಂದ ಆರಂಭಗೊಂಡು ಸದ್ವಿದ್ಯಾ ಶಾಲೆ, ನಾರಾಯಣಶಾಸ್ತ್ರಿ ರಸ್ತೆಯ ರಾಘವೇಂದ್ರ ಮಠ, ದಿವಾನ್ ರಸ್ತೆ, ಶಿವರಾಂಪೇಟೆ, ದೇವರಾಜ ಅರಸು ರಸ್ತೆ ಮೂಲಕ ಹಾದುಹೋಗಿ ಮತ್ತೆ 'ವಿವೇಕ ಸ್ಮಾರಕ'ವನ್ನು ತಲುಪಿ ಕೊನೆಗೊಂಡಿತು. ಸಂನ್ಯಾಸಿ ವೃಂದದೊಂದಿಗೆ ಅನೇಕ ಭಕ್ತರು, ಶಾಲಾ ವಿದ್ಯಾರ್ಥಿಗಳು, ಯುವಕರ ತಂಡವು ಸೇರಿಕೊಂಡು, ಶೋಭಾಯಾತ್ರೆಯು ವೀಕ್ಷಕರ ಕಣ್ಮನಗಳನ್ನು ಸೆಳೆಯಿತು.

**ಉದ್ಘಾಟನಾ ಸಮಾರಂಭ :** ೯ನೇ ಸಮ್ಮೇಳನದ ಪ್ರಯುಕ್ತ ನಡೆಸಲಾದ ಮೂರು ದಿನಗಳ '**ಭಕ್ತ ಸಮ್ಮೇಳನ**'ದ ಉದ್ಘಾಟನೆಯು ದಿನಾಂಕ ೫ರಂದು ಸಂಜೆ ೬.೪೫ಕ್ಕೆ ಕುವೆಂಪುನಗರದ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ನಡೆಯಿತು. ಧ್ವಜಾರೋಹಣ, ಆರಾತ್ರಿಕ ಹಾಗೂ ಭಜನೆಯ ನಂತರ ಸಭಾಕಾರ್ಯಕ್ರಮ ಆರಂಭಗೊಂಡಿತು. ರಾಮಕೃಷ್ಣ ಸೇವಾ ಸಂಘದ ಕಾರ್ಯದರ್ಶಿಗಳಾದ ಶ್ರೀ ಎಂ. ದೊರೆರಾಜು ಅವರು ಅತಿಥಿಗಳನ್ನು ಸ್ವಾಗತಿಸಿದರು. ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ಶ್ರೀ ಗೋ.ಮಧುಸೂಧನ್ ಅವರು ಮಾತನಾಡಿದರು. ಭಾವಪ್ರಚಾರ ಪರಿಷತ್ತಿನ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜಿ, ದಾವಣಗೆರೆ, ಹಲಸೂರು, ತುಮಕೂರು, ರಾಣೆಬೆನ್ನೂರು ಆಶ್ರಮಗಳ ಅಧ್ಯಕ್ಷ ಸ್ವಾಮೀಜಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಪೊನ್ನಂಪೇಟೆ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಪರಹಿತಾನಂದಜಿಯವರು ವಂದನಾರ್ಪಣೆ ಮಾಡಿದರು.

**ಯುವಸಮ್ಮೇಳನ:** ಎರಡನೇ ದಿನವಾದ ಜನವರಿ ೬ರಂದು ಬೆಳಿಗ್ಗೆ ೬.೧೫ಕ್ಕೆ ಮೈಸೂರಿನ ರಾಮಕೃಷ್ಣ ನಗರದಲ್ಲಿರುವ **ಪರಮಹಂಸ ವೃತ್ತ**ದಲ್ಲಿ ಉಷಾಕೀರ್ತನೆ, ನಿರ್ದೇಶಿತ ಧ್ಯಾನ ಹಾಗೂ ಪ್ರಾತಃಸ್ಮರಣೆ ಕಾರ್ಯಕ್ರಮಗಳು ನಡೆದವು. ಉಪಾಹಾರದ ನಂತರ ಯುವ ಸಮ್ಮೇಳನದ ಅಂಗವಾಗಿ ವಿವಿಧ ಗೋಷ್ಠಿಗಳು ಆರಂಭ










ಗೊಂಡವು. ಬೆಳಿಗ್ಗೆ ೮ಕ್ಕೆ ನಡೆದ 'ದಿವ್ಯತ್ರಯ ದರ್ಶನ ಧಾರೆ'ಯ **ಒಂದನೇ ಗೋಷ್ಠಿ**ಯಲ್ಲಿ ಮೊದಲಿಗೆ ಭಜನೆ, ಸ್ವಾಗತಗಳಾದ ನಂತರ ಮಾತಾಜಿ ವಿವೇಕಮಯಿ, ಸ್ವಾಮಿ ನಿರ್ಭಯಾನಂದ ಸರಸ್ವತಿ ಹಾಗೂ ಚಕ್ರವರ್ತಿ ಸೂಲಿಬೆಲೆಯವರ ಉಪನ್ಯಾಸಗಳು ನಡೆದವು. ಚಹಾ ವಿರಾಮದ ನಂತರ ವಿ.ಬಿ. ಆರತಿ, ಸ್ವಾಮಿ ಮಹಾಮೇಧಾ ನಂದಜಿ, ಸ್ವಾಮಿ ತ್ಯಾಗೀಶ್ವರಾನಂದಜಿಯವರ ಉಪನ್ಯಾಸಗಳು ನಡೆದವು. ಮಧ್ಯಾಹ್ನದ ಪ್ರಸಾದದ ನಂತರ ೨ ಘಂಟೆಗೆ ನಡೆದ 'ದಿವ್ಯತ್ರಯ ದರ್ಶನ ಧಾರೆ'ಯ **ಎರಡನೇ ಗೋಷ್ಠಿ**ಯಲ್ಲಿ ಸ್ವಾಮಿ ಯುಕ್ತೇಶಾನಂದಜಿ, ಸ್ವಾಮಿ ಅಭಯಾನಂದಜಿ, ಸ್ವಾಮಿ ಸರ್ವ ಜಯಾನಂದಜಿಯವರ ಉಪನ್ಯಾಸಗಳಿದ್ದವು. ಚಹಾ ವಿರಾಮದ ನಂತರ ಉಡುಪಿಯ ಪೇಜಾವರ ಮಠದ ಶ್ರೀವಿಶ್ವಪ್ರಸನ್ನ ತೀರ್ಥ ಅವರ ದಿವ್ಯಸಾನ್ನಿಧ್ಯದಲ್ಲಿ 'ದಿವಯತ್ರಯ ದರ್ಶನಧಾರೆ'ಯ **೩ನೇ ಗೋಷ್ಠಿ** ಆರಂಭಗೊಂಡಿತು. ಶಾಸಕರಾದ ಶ್ರೀ ಬಿ.ವೈ. ವಿಜಯೇಂದ್ರ ಅವರು ಈ ಸಂದರ್ಭದಲ್ಲಿ ಮಾತನಾಡಿದರು. ಗೋಷ್ಠಿಯಲ್ಲಿ ಸ್ವಾಮಿ ಜಿತಕಾಮಾನಂದಜಿ, ಸ್ವಾಮಿ ಮುಕ್ತಿದಾನಂದಜಿ, ಡಾ. ಹೆಚ್.ಎನ್.ಮುರಳೀಧರ, ಸ್ವಾಮಿ ವೀರೇಶಾನಂದ ಸರಸ್ವತೀ ಹಾಗೂ ಸ್ವಾಮಿ ಬೋಧಸ್ವರೂಪನಂದಜಿಯವರು ಉಪನ್ಯಾಸ ಮಾಡಿದರು. ೭-೩೦ರಿಂದ ಬೆಳಗಾವಿಯ ಶಾಂತಲಾ ನಾಟ್ಯಾಲಯ ತಂಡವು '**ಶ್ರೀರಾಮಕೃಷ್ಣ ಚರಿತಂ**' ಎಂಬ ನೃತ್ಯರೂಪಕವನ್ನು ನಡೆಸಿಕೊಟ್ಟಿತು.

**ಮೂರನೇ ದಿನ:** ಜನವರಿ ೭ ರಂದು 'ದಿವ್ಯತ್ರಯ ದರ್ಶನ ಧಾರೆ'ಯ **೪ನೇ ಗೋಷ್ಠಿ**ಯಲ್ಲಿ ಮಾತಾಜಿ ಚೈತನ್ಯಮಯಿ, ಮಾತಾಜಿ ತ್ಯಾಗಮಯಿ, ಮಾತಾಜಿ ಯೋಗಾನಂದಮಯಿ ಉಪನ್ಯಾಸ ನೀಡಿದರು, ಬಳಿಕ ಮಾತಾಜಿಯವರಿಗೆ 'ಮಾತೃಪೂಜೆ' ನಡೆಯಿತು. ಚಹಾ ವಿರಾಮದ ನಂತರ ಶ್ರೀ ಹೆಚ್.ವಿ. ರಾಜೀವ್ ಅವರು ಕಿರು ಭಾಷಣ ನೀಡಿದರು. ಗೋಷ್ಠಿಯ ಅಂಗವಾಗಿ ಸ್ವಾಮಿ ನಿತ್ಯಸ್ಥಾನಂದಜಿ, ಸ್ವಾಮಿ ವೀರೇಶಾನಂದಜಿ, ಡಾ. ಸಿ.ಪಿ.ಕೆ. ಹಾಗೂ ಡಾ. ಹಂಪಾನಾಗರಾಜಯ್ಯ ಅವರು ಉಪನ್ಯಾಸ ನೀಡಿದರು. ಮಾಜಿ ಶಾಸಕರಾದ ಶ್ರೀ ಡಿ.ಆರ್.ಪಾಟೀಲ್ ರವರು ಕಿರುಭಾಷಣ ಮಾಡಿದರು. ಬಳಿಕ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಶ್ರೀ ದಿವಾಕರ್ ಹೆಗಡೆ ಅವರಿಂದ **ಏಕವ್ಯಕ್ತಿ ತಾಳೆ ಮದ್ದಳೆ** ನಡೆಯಿತು. ಅನಂತರ ಯತಿಗಳಿಗೆ 'ಯತಿ ಪೂಜೆ' ನಡೆಯಿತು.

ಮಧ್ಯಾಹ್ನ ೩ರಿಂದ ನಡೆದ 'ದಿವ್ಯತ್ರಯ ದರ್ಶನಧಾರೆ' ಯ **೫ನೆ ಗೋಷ್ಠಿ**ಯಲ್ಲಿ ಸ್ವಾಮಿ ಜ್ಞಾನಯೋಗನಂದಜಿ, ಸ್ವಾಮಿ ಪ್ರಕಾಶಾನಂದಜಿ, ಸ್ವಾಮಿ ಅಮೂರ್ತಾನಂದಜಿಯವರು ಉಪನ್ಯಾಸ ನೀಡಿದರು. ಬಳಿಕ ಬೆಂಗಳೂರಿನ ವಿವೇಕ ಹಂಸ ಬಳಗದಿಂದ ಭಜನೆ ಕಾರ್ಯಕ್ರಮ ನಡೆಯಿತು

**ಸಮಾರೋಪ ಸಮಾರಂಭ:** ಸಂಜೆ ೬.೩೦ ಕ್ಕೆ **ಸಮಾರೋಪ ಸಮಾರಂಭ** ನಡೆಯಿತು. ಆದಿಚುಂಚನಗಿರಿ ಮಹಾಸಂಸ್ಥಾನದ ಡಾ. ನಿರ್ಮಲಾನಂದನಾಥ ಸ್ವಾಮೀಜಿಯವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಈ ಸಭಾಕಾರ್ಯಕ್ರಮದಲ್ಲಿ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜಿ, ಗದಗ ರಾಮಕೃಷ್ಣ-ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ನಿರ್ಭಯಾನಂದಜಿ, ರಾಣೆಬೆನ್ನೂರು ಆಶ್ರಮದ ಅಧ್ಯಕ್ಷರಾದ ಸ್ವಾಮಿ ಪ್ರಕಾಶಾನಂದಜಿ, ವಿಜಯವಾಡ ರಾಮಕೃಷ್ಣ ಮಿಷನ್ನಿನ ಅಧ್ಯಕ್ಷರಾದ ಸ್ವಾಮಿ ವಿನಿಶ್ಚಲಾನಂದಜಿ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಪ್ರೊ.ಚಿದಾನಂದ ಗೌಡ, ಶ್ರೀಮತಿ ಸುನಂದ ಪಾಲನೇತ್ರ ಮುಂತಾದ ಹಲವು ಗಣ್ಯರು ಭಾಗವಹಿಸಿದ್ದರು. ಸಭಾಕಾರ್ಯಕ್ರಮದ ನಂತರ ವಿದ್ವಾನ್ ಶ್ರೀ ಮತ್ತೂರು ಕುಮಾರಸ್ವಾಮಿಯವರಿಂದ **ಗಮಕ ವಾಚನ** ಕಾರ್ಯಕ್ರಮ ನಡೆಯಿತು.





ಸುದ್ದಿ ಸಂಚಯ

# ರಾಮಕೃಷ್ಣ ಮಿಷನ್‌ನ 114ನೇ ವಾರ್ಷಿಕ ಸಭೆಯ ಸಂಕ್ಷಿಪ್ತ ವರದಿ

**ರಾ**ಮಕೃಷ್ಣ ಮಿಷನ್ನಿನ **114ನೇ ವಾರ್ಷಿಕ ಸಭೆ**ಯು 2023ರ ಡಿಸೆಂಬರ್ 17ರ ಭಾನುವಾರ ಮಧ್ಯಾಹ್ನ 3.30ಕ್ಕೆ ಬೇಲೂರು ಮಠದಲ್ಲಿ ನಡೆಯಿತು. ಈ ಸಭೆಯಲ್ಲಿ ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ನಿನ ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಸುವೀರಾನಂದರು '2022-23ನೇ ವಿತ್ತೀಯ ವರ್ಷದ ಅವಧಿಯಲ್ಲಿ ನಡೆದ ರಾಮಕೃಷ್ಣ ಮಿಷನ್ನಿನ ಕಾರ್ಯಗಳ ಬಗೆಗಿನ ಆಡಳಿತ ಮಂಡಳಿಯ ವರದಿ'ಯನ್ನು ಮಂಡಿಸಿದರು. ಅದರ ಸಾರಾಂಶವನ್ನು ಈ ಕೆಳಗೆ ನೀಡಲಾಗಿದೆ:

### ೧) ರಾಮಕೃಷ್ಣ ಮಿಷನ್ನಿಗೆ ಸಂದ ಪ್ರಶಸ್ತಿ ಮತ್ತು ಮನ್ನಣೆಗಳು

1) ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ನಿನ ಸೇವಾಕಾರ್ಯಗಳನ್ನು ಪರಿಗಣಿಸಿ, ಕೊಲ್ಕತ್ತದ 24 ಪರಗಣ (ಉತ್ತರ) ಜಿಲ್ಲೆಯ ಬರಾಕ್‌ಪುರದ ಗಾಂಧಿ ಸ್ಮಾರಕ ಸಂಗ್ರಹಾಲಯವು '**ಮಹಾತ್ಮಾ ಗಾಂಧಿ ಸ್ಮಾರಕ ಪ್ರಶಸ್ತಿ**'ಯನ್ನು ನೀಡಿದೆ.

2) ನ್ಯಾಷನಲ್ ಅಸೆಸ್‌ಮೆಂಟ್ ಅಂಡ್ ಅಕ್ರೆಡಿಟೇಶನ್ ಕೌನ್ಸಿಲ್ (NAAC) ಸಂಸ್ಥೆಯು ಐದು ವರ್ಷಗಳ ಅವಧಿಗಾಗಿ ಕೊಲ್ಕತ್ತದ **ರಹರಾ**ದಲ್ಲಿರುವ ವಿವೇಕಾನಂದ ಸೆಂಟಿನರಿ ಕಾಲೇಜಿಗೆ A++ ಹಾಗೂ **ಕೊಯಂಬತ್ತೂರಿ**ನ ವಿಜ್ಞಾನ ಹಾಗೂ ಕಲಾ ಕಾಲೇಜಿಗೆ ಮತ್ತು ಮಾರುತಿ ದೈಹಿಕ ಶಿಕ್ಷಣ ಕಾಲೇಜಿಗೆ A+ ಸ್ಥಾನವನ್ನು ನೀಡಿದೆ.

3) ನಮ್ಮ ನಾಲ್ಕು ಪದವಿ ಕಾಲೇಜುಗಳಿಗೆ ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದ ನ್ಯಾಶನಲ್ ಇನ್‌ಸ್ಟಿಟ್ಯೂಶನಲ್ ರ್‍ಯಾಂಕಿಂಗ್ ಫ್ರೇಮ್‌ವರ್ಕ್ (NIRF) ನೀಡುವ ವಿಶಿಷ್ಟ ಸ್ಥಾನಮಾನವು ಲಭಿಸಿದೆ: ವಿದ್ಯಾಮಂದಿರ (**ಶಾರದಾಪೀಠ**, ಬೇಲೂರು ಮಠ) - 15ನೇ ರ್‍ಯಾಂಕ್; ವಿವೇಕಾನಂದ ಸೆಂಟಿನರಿ ಕಾಲೇಜು, **ರಹರಾ** - 8ನೇ ರ್‍ಯಾಂಕ್; ವಸತಿ ಕಾಲೇಜು, **ನರೇಂದ್ರಪುರ**, ಕೊಲ್ಕತ್ತ - 19ನೇ ರ್‍ಯಾಂಕ್, ಕಲಾ ಹಾಗೂ ವಿಜ್ಞಾನ ಕಾಲೇಜು, **ಕೊಯಂಬತ್ತೂರು** -71ನೇ ರ್‍ಯಾಂಕ್.

4) ಬೇಲೂರು, ಹೌರಾ, ಇಲ್ಲಿನ ರಾಮಕೃಷ್ಣ ಮಿಷನ್ ವಿವೇಕಾನಂದ ಶಿಕ್ಷಣ ಹಾಗೂ ಸಂಶೋಧನ ಸಂಸ್ಥೆಯ (RKMVERI, ಖಾಸಗಿ ವಿಶ್ವವಿದ್ಯಾನಿಲಯ) ಆಫ್ ಕ್ಯಾಂಪಸ್ ಕೇಂದ್ರವಾದ **ನರೇಂದ್ರಪುರ** (ಕೋಲ್ಕತ್ತ)ವನ್ನು ಮೀರತ್ತಿನ ಮೋದಿಪುರಂನಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಫಾರ್ಮಿಂಗ್ ಸಿಸ್ಟಮ್ಸ್ ರಿಸರ್ಚ್ ಸಂಸ್ಥೆಯ - ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್ (ICAR) ಘಟಕವು 'ಅಖಿಲ ಭಾರತ ಸಾವಯವ ಕೃಷಿಯ ನೆಟ್‌ವರ್ಕ್ ಕಾರ್ಯಕ್ರಮದ ಅತ್ಯುತ್ತಮ ಕೇಂದ್ರ,' ವೆಂದು ಪರಿಗಣಿಸಿದೆ.

5) ಕೊಲ್ಕತ್ತದ **ನರೇಂದ್ರಪುರ** ರಾಮಕೃಷ್ಣ ಮಿಷನ್ ವಿದ್ಯಾಲಯದ ಒಬ್ಬ ವಿದ್ಯಾರ್ಥಿಯು ಪಶ್ಚಿಮ ಬಂಗಾಳ ಕೌನ್ಸಿಲ್ ಆಫ್ ಹೈಯರ್ ಸೆಕೆಂಡರಿ ಎಜುಕೇಶನ್ ನಡೆಸುವ ಹೈಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್ (99.2%) ಪಡೆದಿರುತ್ತಾನೆ.

6) ಪಶ್ಚಿಮ ಬಂಗಾಳದ **ಮಾಲ್ದಾ**ದಲ್ಲಿರುವ ಹೈಯರ್ ಸೆಕೆಂಡರಿ ಶಾಲೆಗೆ ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ವತಿಯಿಂದ 'ಸ್ವಚ್ಛ ವಿದ್ಯಾಲಯ ಪುರಸ್ಕಾರ'ವು (ಜಿಲ್ಲಾ ಹಂತದ ಪ್ರಶಸ್ತಿ) ಲಭಿಸಿದೆ.

7) ಕೊಲ್ಕತ್ತದ **ನರೇಂದ್ರಪುರ**ದಲ್ಲಿರುವ ಅಂಧ ಬಾಲಕರ ಶಿಕ್ಷಣ ಸಂಸ್ಥೆಯು ತನ್ನ ಬ್ರೈಲ್ ಮುದ್ರಣಾಲಯಕ್ಕಾಗಿ 'ವಿಶೇಷ ಚೇತನರ ಸಬಲೀಕರಣ ರಾಜ್ಯಪ್ರಶಸ್ತಿ'ಯನ್ನು ಪಡೆದಿದೆ.

8) **ಡೆಹ್ರಡೂನಿ**ನ ವಿವೇಕಾನಂದ ನೇತ್ರಾಲಯಕ್ಕೆ ಮುಂದಿನ ಎರಡು ವರ್ಷಗಳ ತನಕ 'ಎಂಟ್ರಿ ಲೆವೆಲ್-ಸ್ಮಾಲ್ ಹೆಲ್ತ್ ಕೇರ್ ಪ್ರೋಗ್ರಾಂ' ಅಡಿಯಲ್ಲಿ NABH ಸರ್ಟಿಫಿಕೇಶನ್ ಲಭಿಸಿದೆ.

9) **ಮೈಸೂರು** ಆಶ್ರಮಕ್ಕೆ ಅದರ ಸೇವಾಕಾರ್ಯಗಳಿಗಾಗಿ 'ಅಮೃತ ಮಹೋತ್ಸವ ರಾಜ್ಯಪ್ರಶಸ್ತಿ' ಲಭಿಸಿದೆ.

## ೨) ಹೊಸ ಶಾಖಾಕೇಂದ್ರಗಳು:

1) ಪಶ್ಚಿಮ ಬಂಗಾಳದ ಜಲಪ್ಯಾಗುರಿ ಜಿಲ್ಲೆಯ **ಸಾಹುದಂಗಿ ಹಾಟ್** ನಲ್ಲಿ ಹೊಸ ರಾಮಕೃಷ್ಣ ಮಿಷನ್ ಶಾಖಾಕೇಂದ್ರವನ್ನು ಆರಂಭಿಸಲಾಗಿದೆ.

2) **ಭೂಜ್** (ಗುಜರಾತ್), **ಚೆಂಗಂ** (ತಮಿಳುನಾಡು), **ಯಾದಾದ್ರಿ ಭುವನಗಿರಿ** (ತೆಲಂಗಾಣ) ಈ ಪ್ರದೇಶಗಳಲ್ಲಿ ರಾಮಕೃಷ್ಣ ಮಠದ ಶಾಖಾಕೇಂದ್ರಗಳನ್ನು ಆರಂಭಿಸಲಾಗಿದೆ.

## ೩) ಚಟುವಟಿಕೆಗಳು: ಭಾರತದಲ್ಲಿ :

ಭಾರತದಲ್ಲಿರುವ ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ ಒಟ್ಟು 224 ಶಾಖಾಕೇಂದ್ರ ಹಾಗೂ ಉಪ-ಕೇಂದ್ರಗಳ ಮೂಲಕ ವಿವಿಧ ಸೇವಾಕಾರ್ಯಗಳಿಗಾಗಿ 1171.61 ಕೋಟಿ ರೂಪಾಯಿಗಳನ್ನು ಖರ್ಚುಮಾಡಿವೆ. ವಿವರಗಳು ಈ ಕೆಳಗಿನಂತಿವೆ:

| ಸೇವಾಕ್ಷೇತ್ರದ ಹೆಸರು | ಫಲಾನುಭವಿಗಳ ಸಂಖ್ಯೆ (ಲಕ್ಷಗಳಲ್ಲಿ) | ಖರ್ಚು ಮಾಡಿದ ಮೊತ್ತ (ಕೋಟಿಗಳಲ್ಲಿ) |
|---|---|---|
| ಪರಿಹಾರ ಮತ್ತು ಪುನರ್ವಸತಿ | 5.31 | 7.46 |
| ಸಾಧಾರಣ ಜನಕಲ್ಯಾಣ | 38.75 | 28.42 |
| ವೈದ್ಯಕೀಯ | 86.30 | 412.08 |
| ಶೈಕ್ಷಣಿಕ | 3.08 | 594.53 |
| ಗ್ರಾಮೀಣಾಭಿವೃದ್ಧಿ | 70.67 | 101.54 |
| ಸಾಹಿತ್ಯ ಪ್ರಕಟಣೆ | | 27.58 |
| | **ಒಟ್ಟು** | **1171.61** |

## ೩) ಚಟುವಟಿಕೆಗಳು: ವಿದೇಶಗಳಲ್ಲಿ :

1) ಬಾಂಗ್ಲಾದೇಶದ **ಬಾಲಿಯಾಟಿ** ಕೇಂದ್ರದಲ್ಲಿ ಹೊಸದಾಗಿ ನಿರ್ಮಾಣಗೊಂಡ ಶ್ರೀರಾಮಕೃಷ್ಣ ಮಂದಿರವನ್ನು ಉದ್ಘಾಟಿಸಲಾಯಿತು.

2) ಅಮೆರಿಕದ **ಚಿಕಾಗೋ** ಕೇಂದ್ರದಲ್ಲಿ ಹೊಸ ಘಟಕವಾದ 'Home of Harmony' (ಚಿಕಾಗೋ) ಅನ್ನು ಉದ್ಘಾಟಿಸಲಾಯಿತು.

3) **ಕೊಲಂಬೋ** ಹಾಗೂ **ಬಟ್ಟಿಕಲೋವ** ಕೇಂದ್ರಗಳ ಎರಡು ಭಾನುವಾರದ ಶಾಲೆಗಳು 'ಅತ್ಯುತ್ತಮ ಭಾನುವಾರದ ಧಾರ್ಮಿಕ ಶಾಲಾ ಪ್ರಶಸ್ತಿ'ಯನ್ನು ಪಡೆದಿವೆ. ಶ್ರೀಲಂಕಾ ಸರ್ಕಾರದ ಹಿಂದೂಧರ್ಮ ಹಾಗೂ ಸಾಂಸ್ಕೃತಿಕ ವ್ಯವಹಾರಗಳ ವಿಭಾಗವು ಇದನ್ನು ನೀಡಿದೆ.

4) ಭಾರತದ ಹೊರಗಡೆ 24 ದೇಶಗಳಲ್ಲಿರುವ ರಾಮಕೃಷ್ಣ ಮಿಷನ್ ಹಾಗೂ ರಾಮಕೃಷ್ಣ ಮಠದ 96 ಶಾಖಾಕೇಂದ್ರಗಳು ಹಾಗೂ ಉಪ-ಕೇಂದ್ರಗಳು ವಿವಿಧ ಸೇವಾಕಾರ್ಯಗಳನ್ನು ನಡೆಸಿವೆ.

ರಾಮಕೃಷ್ಣ ಮಿಷನ್ ಮತ್ತು ರಾಮಕೃಷ್ಣ ಮಿಷನ್ನಿನ ಸೇವಾಕಾರ್ಯಗಳನ್ನು ಮುಂದುವರೆಸಿಕೊಂಡು ಹೋಗುವಲ್ಲಿ ಅತ್ಯಂತ ಕಾಳಜಿಯಿಂದ ಅಮೂಲ್ಯವಾದ ಬೆಂಬಲ ಹಾಗೂ ಸಹಕಾರ ನೀಡಿರುವ ನಮ್ಮ ಸದಸ್ಯರಿಗೂ, ಹಿತೈಷಿಗಳಿಗೂ, ಭಕ್ತರಿಗೂ ಈ ಸಂದರ್ಭ ದಲ್ಲಿ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಮರ್ಪಿಸುತ್ತೇವೆ.

(ಸ್ವಾಮಿ ಸುವೀರಾನಂದ)

ಪ್ರಧಾನ ಕಾರ್ಯದರ್ಶಿಗಳು

17 ಡಿಸೆಂಬರ್ 2023 ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್

Managing Editor : Swami Muktidananda Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020